# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಅಹಮ್ಮದ್ ಖಲೀಲ್, ಕಾರ್ಯದರ್ಶಿ (ನಿವೃತ್ತ), ರಾಮಸಾಗರ ಗ್ರಾಮ ಪಂಚಾಯಿತಿ, ಶಿವಮೊಗ್ಗ ಜಿಲ್ಲೆ ಇವರು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು ಇಲ್ಲಿ ದಾಖಲಿಸಿರುವ ಅರ್ಜಿ ಸಂಖ್ಯೆ:1301/2020 ರ ಆದೇಶದನ್ವಯ ಕ್ರಮವಹಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 221 ಕೆಎಸ್ಎಸ್ 2002, ದಿನಾಂಕ:22.10.2022.
2. ಅಪರ ನಿಬಂಧಕರು, ವಿಚಾರಣೆಗಳು-3, ಕರ್ನಾಟಕ ಲೋಕಾಯುಕ್ತ ಇವರ ಇಲಾಖಾ ವಿಚಾರಣಾ ವರದಿ ಸಂಖ್ಯೆ: ಲೋಕ್/ ಎಆರ್ಇ-3/ ಇಎನ್‌ಕ್ಯೂ-84/2002-03, ದಿನಾಂಕ: 31.07.2003
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 201 ಕೆಎಸ್ಎಸ್ 2003, ದಿನಾಂಕ: 05.12.2003.
4. ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು ರವರ ಅರ್ಜಿ ಸಂಖ್ಯೆ: 8611/2003 C/W 9121/2003ರ ಕುರಿತಂತೆ ದಿನಾಂಕ: 26.11.2008 ರಂದು ನೀಡಿರುವ ತೀರ್ಪು.
5. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಇವರ ಪತ್ರ ಸಂಖ್ಯೆ: ಲೋಕ್/ ಎಆರ್ಇ-3/ ಇಎನ್‌ಕ್ಯೂ-84/ 2002-03, ದಿನಾಂಕ: 10.06.2009.
6. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 182 ಗ್ರಾಪಂಕಾ 2009, ದಿನಾಂಕ: 19.10.2010.
7. ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು ರವರ ಅರ್ಜಿ ಸಂಖ್ಯೆ: 2376/2012 ರ ಪ್ರಕರಣದಲ್ಲಿ ನೀಡಿದ ಆದೇಶ, ದಿನಾಂಕ:24.07.2018.
8. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 505 ಗ್ರಾಪಂಕಾ 2018, ದಿನಾಂಕ:25.11.2019.
9. ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು ರವರ ಅರ್ಜಿ ಸಂಖ್ಯೆ: 1301/2020 ರ ಪ್ರಕರಣದಲ್ಲಿ ನೀಡಿದ ಆದೇಶ, ದಿನಾಂಕ:02.09.2021.
10. ಕಾನೂನು ಇಲಾಖೆಯ ಟಿಪ್ಪಣಿ ಸಂಖ್ಯೆ: ಕಾನೂನು/ಅ.ಕಾ.ಕಾ-1/ವ್ಯಾಜ್ಯ ಸಂಖ್ಯೆ: 172, ದಿನಾಂಕ:02.03.2022.

*****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ (1) ರ ಆದೇಶದಲ್ಲಿ ಶ್ರೀ ಅಹಮ್ಮದ್ ಖಲೀಲ್, ಹಿಂದಿನ ಕಾರ್ಯದರ್ಶಿ (ಹಾಲಿ ನಿವೃತ್ತ), ನಿಸರಾಣಿ ಗ್ರಾಮ ಪಂಚಾಯಿತಿ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರ ವಿರುದ್ಧ ಲಂಚ ಸ್ವೀಕಾರದ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14-ಎ ರಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮಾಂಕ (2) ರಲ್ಲಿ ಅಪರ ನಿಬಂಧಕರು, ವಿಚಾರಣೆಗಳು-3, ಕರ್ನಾಟಕ ಲೋಕಾಯುಕ್ತ ಇವರು ಸದರಿಯವರ ವಿರುದ್ಧದ ಆಪಾದನೆಗಳ ಕುರಿತಂತೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11ರಡಿ ಇಲಾಖಾ ವಿಚಾರಣೆ ನಡೆಸಿ, ಸಲ್ಲಿಸಿದ ವಿಚಾರಣಾ ವರದಿಯನ್ವಯ ಆರೋಪಗಳು ಸಾಬೀತಾಗಿರುವುದಾಗಿ ನಿರ್ಣಯಿಸಿರುತ್ತಾರೆ. ಸದರಿ ವಿಚಾರಣೆಯನ್ನಾಧರಿಸಿ ಮಾನ್ಯ ಲೋಕಾಯುಕ್ತರ ಶಿಫಾರಸ್ಸಿನಂತೆ ನೌಕರರಿಗೆ

...2

ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 8(viii) ರಡಿಯಲ್ಲಿ ನಿರ್ಧಿಷ್ಟಪಡಿಸಿದಂತೆ ಸೇವೆಯಿಂದ ವಜಾಗೊಳಿಸುವ ದಂಡನೆ ವಿಧಿಸಿ ಮೇಲೆ ಓದಲಾದ ಕ್ರಮಾಂಕ (3)ರಲ್ಲಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (3) ರ ಸರ್ಕಾರದ ಆದೇಶದ ವಿರುದ್ಧ ಸದರಿಯವರು ಕ್ರಮಾಂಕ (4) ರಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾಖಲಿಸಿದ್ದ ಅರ್ಜಿ ಸಂಖ್ಯೆ: 8611/2003 C/W 9121/2003 ರ ಕುರಿತಂತೆ ಮಾನ್ಯ ನ್ಯಾಯಾಲಯವು ದಿನಾಂಕ: 26.11.2008ರಂದು ನೀಡಿದ ಆದೇಶದಂತೆ ಕ್ರಮವಹಿಸಲು ಲೋಕಾಯುಕ್ತರ ಅಭಿಪ್ರಾಯ ಕೋರಲಾಗಿ, ಸದರಿಯವರು ಕ್ರಮಾಂಕ (5) ರಲ್ಲಿ ನೀಡಿರುವ ಶಿಫಾರಸ್ಸಿನನ್ವಯ ಸದರಿ ನೌಕರರನ್ನು ಮೇಲೆ ಓದಲಾದ ಕ್ರಮಾಂಕ (6) ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 8(vii) ಅಡಿಯಲ್ಲಿ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆ ವಿಧಿಸಿ ಆದೇಶಿಸಲಾಗಿತ್ತು.

ಈ ಆದೇಶದ ವಿರುದ್ಧ ಸದರಿಯವರು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ: 2376/2012ಅನ್ನು ದಾಖಲಿಸಿದ್ದು, ಈ ಪ್ರಕರಣದ ಕುರಿತಂತೆ ಮಾನ್ಯ ನ್ಯಾಯ ಮಂಡಳಿಯು ಮೇಲೆ ಓದಲಾದ ಕ್ರಮಾಂಕ (7) ರಲ್ಲಿ ನೀಡಲಾದ ಆದೇಶದನ್ವಯ ಕ್ರಮವಹಿಸುವ ಸಂಬಂಧ ಪರಿಶೀಲಿಸಿ, ಮೇಲೆ ಓದಲಾದ ಕ್ರಮಾಂಕ (8) ರ ಸರ್ಕಾರದ ಆದೇಶದಲ್ಲಿ ಸದರಿಯವರಿಗೆ ಈಗಾಗಲೇ ದಂಡನೆ ವಿಧಿಸಲಾಗಿದ್ದ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 182 ಗ್ರಾಪಂಕಾ 2009, ದಿನಾಂಕ: 19.10.2010 ಅನ್ನು ಹಿಂಪಡೆದು, ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214(1)(ಎ)ರಡಿ ಅವರ ಪಿಂಚಣಿಯಿಂದ ಶಾಶ್ವತವಾಗಿ ಶೇ.50ರಷ್ಟು ಕಡಿತಗೊಳಿಸುವ ದಂಡನೆಯನ್ನು ವಿಧಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮಾಂಕ (9)ರ ಸರ್ಕಾರದ ಆದೇಶದ ವಿರುದ್ಧ ಸದರಿಯವರು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ: 1301/2020 ಅನ್ನು ದಾಖಲಿಸಿದ್ದು, ಈ ಪ್ರಕರಣದಲ್ಲಿ ಮಾನ್ಯ ನ್ಯಾಯ ಮಂಡಳಿಯು ದಿನಾಂಕ:02.09.2021 ರಂದು ಹೊರಡಿಸಿದ ಆದೇಶದಲ್ಲಿ ಸರ್ಕಾರದ ದಿನಾಂಕ: 25.11.2019ರ ಆದೇಶವನ್ನು ರದ್ದುಗೊಳಿಸಿ, ಸದರಿಯವರಿಗೆ ಸಲ್ಲಬೇಕಾದ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ಮಂಜೂರು ಮಾಡಲು ನಿರ್ದೇಶಿಸಿರುತ್ತದೆ. ಮಾನ್ಯ ನ್ಯಾಯ ಮಂಡಳಿಯ ಆದೇಶದ ಉದ್ಧೃತ ಭಾಗ ಈ ಕೆಳಕಂಡಂತಿರುತ್ತದೆ.

> ***"Accordingly, the application is allowed and the impugned order bearing No.Gra.Aa.Pa. 505. Gra.Pam.Ka.2018 dated 25.11.2019 passed by the 1st respondent and produced vide Annexure-A15 in so far imposition of penalty of reduction of 50% of the pension of the applicant permanently by invoking Rule 214(1)(a) of KCSRs is hereby set aside.***
>
> ***Respondent – Government is hereby directed to pay all the consequential including monetary benefits to the applicant to which he is legally entitled.***
>
> ***Time for compliance is three months from the date of receipt of a copy of this order."***

ಮಾನ್ಯ ನ್ಯಾಯ ಮಂಡಳಿಯ ಆದೇಶದನ್ವಯ ಕ್ರಮವಹಿಸುವ ಸಂಬಂಧ ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯ ಕೋರಲಾಗಿ, ಸದರಿಯವರು ಅಭಿಪ್ರಾಯಿಸಿರುವ ಅಂಶಗಳಿಗೆ ಕಾನೂನು ಇಲಾಖೆಯು ಮೇಲೆ ಓದಲಾದ ಕ್ರಮಾಂಕ (10) ರ ಟಿಪ್ಪಣಿಯಲ್ಲಿ ಅನುಮೋದನೆ ನೀಡಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ: 1301/2021 ರ ಪ್ರಕರಣದ ಕುರಿತಂತೆ ದಿನಾಂಕ:02.09.2021 ರಂದು ನೀಡಿದ ಆದೇಶದಂತೆ ಕ್ರಮ ವಹಿಸಲು ಶ್ರೀ ಅಹಮ್ಮದ್ ಖಲೀಲ್, ಹಿಂದಿನ ಕಾರ್ಯದರ್ಶಿ (ಹಾಲಿ ನಿವೃತ್ತ), ನಿಸಾರಾಣಿ ಗ್ರಾಮ ಪಂಚಾಯಿತಿ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರಿಗೆ ಅವರ ಪಿಂಚಣಿಯಿಂದ ಶಾಶ್ವತವಾಗಿ ಶೇ.50ರಷ್ಟು ಕಡಿತಗೊಳಿಸುವ ದಂಡನೆಯನ್ನು ವಿಧಿಸಿ ಈಗಾಗಲೇ ಆದೇಶಿಸಲಾಗಿರುವ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 505 ಗ್ರಾಪಂಕಾ 2018, ದಿನಾಂಕ: 25.11.2019ರ ಆದೇಶವನ್ನು ಹಿಂಪಡೆಯಲು ಹಾಗೂ ಸದರಿಯವರಿಗೆ ಪ್ರಾಪ್ತವಾಗುವ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ಮಂಜೂರು ಮಾಡಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/27/ಗ್ರಾಪಂಸಿ/2021, ಬೆಂಗಳೂರು, ದಿನಾಂಕ:04.07.2022.</u>**

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಅಹಮ್ಮದ್ ಖಲೀಲ್, ಹಿಂದಿನ ಕಾರ್ಯದರ್ಶಿ (ಹಾಲಿ ನಿವೃತ್ತ), ನಿಸಾರಾಣಿ ಗ್ರಾಮ ಪಂಚಾಯಿತಿ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿಂತೆ ಸದರಿಯವರಿಗೆ ಈಗಾಗಲೇ ದಂಡನೆಯನ್ನು ವಿಧಿಸಿ ಆದೇಶಿಸಲಾಗಿರುವ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 505 ಗ್ರಾಪಂಕಾ 2018, ದಿನಾಂಕ:25.11.2019 ರ ಆದೇಶವನ್ನು ಹಿಂಪಡೆದು ಹಾಗೂ ಸದರಿಯವರಿಗೆ ಪ್ರಾಪ್ತವಾಗುವ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ಮಂಜೂರು ಮಾಡಿ ಸರ್ಕಾರವು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

B. Naveenkumar 04/07/22
**(ಬಿ.ನವೀನ್ ಕುಮಾರ್)**
ಉಪನಿರ್ದೇಶಕರು ಹಾಗೂ ಪದನಿಮಿತ್ತ,
ಸರ್ಕಾರದ ಅಧೀನ ಕಾರ್ಯದರ್ಶಿ(ಗ್ರಾ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**<u>ಗೆ,</u>**

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
3. ರಿಜಿಸ್ಟಾರ್, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಶಿವಮೊಗ್ಗ ಜಿಲ್ಲೆ.
6. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಸೊರಬ, ಶಿವಮೊಗ್ಗ ಜಿಲ್ಲೆ.
7. ಸರ್ಕಾರಿ ವಕೀಲರು, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು.
8. ಶ್ರೀ ಅಹಮ್ಮದ್ ಖಲೀಲ್, ನಿವೃತ್ತ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, 7ನೇ ಮುಖ್ಯ ರಸ್ತೆ, ಟಿಪ್ಪುನಗರ, ಶಾಧಿಮಹಲ್ ಹತ್ತಿರ, 4ನೇ ಅಡ್ಡ ರಸ್ತೆ, ಊರುರುಝ್ ಬಿಲ್ಡಿಂಗ್ ಹತ್ತಿರ, ಶಿವಮೊಗ್ಗ ಜಿಲ್ಲೆ.
9. ಗಣಕ ಕೋಶ.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**<u>ಪ್ರತಿ ಮಾಹಿತಿಗಾಗಿ</u>**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ನಿರ್ದೇಶಕರು ಪಂಚಾಯತ್ ರಾಜ್–1 ರವರ ಆಪ್ತ ಸಹಾಯಕರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

********